N.E.S. Block for Bhalki Taluk.

*Q.—330. Sri MADHAVA RAO (Hulsur).—

Will the Government be pleased to state:—

(*a*) whether they are aware of the demand of the people of Bhalki taluk for a N.E.S. Block;

(*b*) if so, whether they intend to allot a Block to the said place, by April 1960?

A.—Sri H. C. LINGA REDDY (Deputy Minister for Planning and Development).—

(*a*) Yes.

(*b*) The claims of Bhalki Taluk will be considered by Government at the time of the next allotment of N.E.S. Blocks.

———

Member's representation.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ಈ ಪ್ರಶ್ನೋತ್ತರಗಳನ್ನು ನಮಗೆ ಎರಡು-ಮೂರು ದಿವಸ ಮುಂಚಿತವಾಗಿ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಅವುಗಳನ್ನು ಓದಿಕೊಂಡು ನಾವು ಬರುವುದಕ್ಕೆ ಅವಕಾಶ ದೊರೆಯುತ್ತದೆ. ಒಂದು ದಿವಸ ಮುಂಚಿತವಾಗಿ ಬರಿಯ ಪ್ರಶ್ನೆಗಳನ್ನಷ್ಟೇ ನಮಗೆ ಓದಗಿಸಲಾಗುತ್ತದೆ. ಈಗ ಸಭೆ ಪ್ರಾರಂಭವಾಗುವ ಪೂರ್ವದಲ್ಲಿ ಪ್ರಶ್ನೋತ್ತರಗಳನ್ನು ನಮಗೆ ಕೊಡುತ್ತಾರೆ. ಅದರಿಂದ ಬಹಳ ಅನಾನುಕೂಲವಾಗುತ್ತದೆ. ಆದುದರಿಂದ ಪ್ರಶ್ನೋತ್ತರ ಪುಸ್ತಕವನ್ನು ಎರಡು ದಿವಸ ಮುಂಚಿತವಾಗಿ ಕೊಡುವ ಹಾಗೆ ವ್ಯವಸ್ಥೆಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದು oral questions and answers ಆಗಿದೆ. ಬೇರೆ ಅಸೆಂಬ್ಲಿಗಳಲ್ಲಿ ಮಂತ್ರಿಗಳು ಪ್ರಶ್ನೋತ್ತರಗಳನ್ನು ಓದಿ ಬಿಡುತ್ತಾರೆ. ಮುಂಬಯಿ ಮತ್ತು ನಮ್ಮ ಈ ಮೈಸೂರು ಅಸೆಂಬ್ಲಿಗಳಲ್ಲಿ ಮಾತ್ರ ಪ್ರಶ್ನೋತ್ತರಗಳನ್ನು ಮುದ್ರಿಸಿ ಪುಸ್ತಕ ರೂಪದಲ್ಲಿ ಒಂದು ಗಂಟೆ ಮುಂಚಿತವಾಗಿ ಕೊಡುವ ಪದ್ಧತಿಯನ್ನು ಇಟ್ಟುಕೊಳ್ಳಲಾಗಿದೆ. ಈ ಪದ್ಧತಿಯನ್ನು ಬದಲಾಯಿಸುವುದಕ್ಕೆ ನಾನು ಪ್ರಯತ್ನ ಮಾಡಿದೆ. ಆದರೆ ಕಮಿಟಿಯು ಇದನ್ನು ಒಪ್ಪಲಿಲ್ಲ. ಒಂದೆರಡು ಗಂಟೆಗಳ ಮುಂಚಿತವಾಗಿ ಕೊಟ್ಟರೆಯೇ ಇಷ್ಟು ಸಪ್ಲಿಮೆಂಟರಿ ಪ್ರಶ್ನೆಗಳು ಬರುತ್ತವೆ. ಎರಡು-ಮೂರು ದಿವಸ ಮೊದಲು ಕೊಟ್ಟರೆ ಇನ್ನು ಹೆಚ್ಚಾಗಿ ಸಪ್ಲಿಮೆಂಟರಿ ಪ್ರಶ್ನೆಗಳು ಬಂದು ಪ್ರಶ್ನೆಗಳ ಪಟ್ಟಿ ಮುಗಿಯುವುದೇ ಇಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ಓರಲ್ಲಾಗಿ ಪ್ರಶ್ನೋತ್ತರ ಕೇಳಿದರೂ ನಾವು ಸಪ್ಲಿಮೆಂಟರಿ ಕೇಳುತ್ತೇವೆ.

ಅಧ್ಯಕ್ಷರು.—Oral answers ನಲ್ಲಿ ಉತ್ತರಗಳನ್ನು ಓದಿ ಬಿಡುತ್ತಾರೆ. ಅದರಿಂದ ಸದಸ್ಯರಿಗೆ ತೊಂದರೆಯಾಗುತ್ತದೆ. ಈಗ ಇಲ್ಲಿಯವರೆಗೆ ನಡೆದುಕೊಂಡು ಬಂದಿರತಕ್ಕ ಹಳೆಯ ಪದ್ಧತಿಯೇ ಚೆನ್ನಾಗಿದೆ.

Sri C. K. RAJIAH SETTY (Chiknaikanahalli).—In view of the special circumstances of today, I wish to state that yesterday the House rose at 8 O'clock and everybody expected that the House would continue even up to 1 O'clock today. Therefore many Members were not able to come at 8-30 a.m. today.

Mr. SPEAKER.—Sufficient notice has been given. After all we are here to do our business. We are here to attend the meetings every day in the Assembly. Hon'ble Members are expected to know these timings. It is our highest duty to attend the meetings of the House.

ಶ್ರೀ ಜಿ. ಎಕ್ಸ್. ಪುಟ್ಟಣ್ಣ (ತುಮಕೂರು).—ನನ್ನ ರೆಪ್ರೆಸೆಂಟೇಷನ್ನಿಗೆ ಆಪ್ಷನ್ ಏನಾಯಿತು?

ಅಧ್ಯಕ್ಷರು.—ರೆಪ್ರೆಸೆಂಟೇಷನ್ ಮಾಡಬಹುದು.

ಶ್ರೀ ಜಿ. ಎಕ್ಸ್. ಪುಟ್ಟಣ್ಣ.—ಈ ಸಲದ ಅಸೆಂಬ್ಲಿ ಶುರುವಾದ ಮೊದಲನೆಯ ದಿವಸ ನಾನು ನೋಡಿದೆ. ನಮ್ಮ ಸ್ಪೀಕರ್‌ಅವರಿಗೆ ಆದಿಶೇಷನನ್ನು ಕೆತ್ತಿರುವ ಮಂಟಪಮಾಡಿದ್ದಾರಲ್ಲ, ಅದರಲ್ಲಿ ಏಳು ಹೆಡೆ ಸರ್ಪವನ್ನು ಕೆತ್ತಿದ್ದಾರೆ. ನಮ್ಮ ದೇಶಕ್ಕೆ ಅದು ಒಳ್ಳೆಯ ಚಿಹ್ನೆ. ಆ ಚಿಹ್ನೆಯಿಂದ ನಮ್ಮ ಸ್ಪೀಕರ್‌ಅವರಿಗೆ ಒಳ್ಳೆಯದಾಗಲಿ. ನೀವು ಇಂಗ್ಲೆಂಡ್ ಪ್ರವಾಸ ಹೋಗಿ ಬಂದಮೇಲೆ ಒಂದುಪುಸ್ತಕವನ್ನು ಕೊಟ್ಟಿದ್ದೀರಿ; ಅದರಲ್ಲಿ ಪಾರ್ಲಮೆಂಟ್ ಸ್ಪೀಕರ್ ಯಾವತರಹ ಬರುತ್ತಾರೆಂದು ಒಂದು ಗ್ರಾಫಿಕ್ ಪಿಕ್ಚರ್ ಕೊಟ್ಟಿದ್ದೀರಿ. ಅದನ್ನು ಓದಿ, ನೀವು ಇಲ್ಲಿ ಬರುವುದನ್ನು ನೋಡಿದರೆ ಪಿಚ್ ಎನ್ನಿಸುತ್ತದೆ. ನೀವು ನನ್ನಷ್ಟು, ದಪ್ಪಗೂ ಇಲ್ಲ; ಚಿಕ್ಕದಾಗಿ ಕುಳಿತುಕೊಂಡಿರುತ್ತೀರಿ. ನಮ್ಮ ಸರ್ಕಾರದವರು ಒಂದು ಗೌನ್, ಒಂದು ಹುಡ್‌ಅನ್ನು ಡೀಸೆನ್ಸಿಗಾಗಿ, ಡೆಕೊರೇಷನ್ನಿಗಾಗಿ ಕೊಡಬೇಕು. ನೀವು ಬಹಳ ಮಜಬೂತಾಗಿ ಆ ಸೀಟಿನಲ್ಲಿ ಕುಳಿತುಕೊಳ್ಳಬೇಕು. ಆ ಸೀಟನ್ನು ಕೊಂಚ ರೈಸ್ ಮಾಡಬೇಕು. ಇಲ್ಲದಿದ್ದರೆ ನಾವು ನಿಮಗೆ ಕಾಣುವುದಿಲ್ಲ. "You must catch the eye of the Speaker" ಎಂದು ಹೇಳುತ್ತೀರಿ. ಆದರೆ ನಿಮ್ಮ ಐ ಕ್ಯಾಚ್ ಮಾಡುವುದಕ್ಕಾಗುವುದಿಲ್ಲ. ನಾನು ತಮಾಷೆಗೆ ಹೇಳುತ್ತಾ ಇಲ್ಲ. ನೀವು ದಯೆಯಿಟ್ಟು ಆ ಬಿಳಿಜೋಪಿ ತೆಗೆಯಿರಿ. ಆ ಸ್ಥಾನಕ್ಕೆ ಹುಡ್, ಗೌನು, ವಿಗ್ ಹಾಕಿಕೊಂಡು ಕುಳಿತುಕೊಳ್ಳಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಸೆಕ್ರೆಟರಿಯವರೂ ಅವುಗಳನ್ನು ಹಾಕಿಕೊಂಡು ಬರಬೇಕು.

ಶ್ರೀ ಜಿ. ಎಕ್ಸ್. ಪುಟ್ಟಣ್ಣ.—ಇನ್ನೊಂದು ವಿಚಾರ. ಡೆಪ್ಯುಟಿ ಕಮೀನಾನ್ಸ್ ಮಿನಿಸ್ಟರು ನಾನ್-ಗೆಜೆಟೆಡ್ ಆಫೀಸರವರ ವಿಚಾರ ಹೇಳಿದರು. The scale of pay of the N.G.Os. in the Mysore State is far better when compared with the Scales of Pay of Andhra and Madras.